

# ಶರ್ಮಿಳಾ ಇಟ್ಟ ಹತ್ತು ಹೆಜ್ಜೆಗಳು

'ಕೃಷ್ಣ' ಸಿನಿಮಾದ ಮೂಲಕ ಜನಪ್ರಿಯತೆಯ ಮೇರೆ ಮುಟ್ಟಿದರೂ, ತಮ್ಮ ನೆಲ ಮತ್ತು ನೆಲೆ ಮರೆಯದ ಗಟ್ಟಿ ವ್ಯಕ್ತಿತ್ವದ ನಟಿ ಶರ್ಮಿಳಾ ಮಾಂಡ್ರೆ. ನಟನೆಯ ಜೊತೆಗೇ ನಿರ್ಮಾಣಕ್ಕೂ ಇಳಿದಿರುವ ಅವರು ಒಳ್ಳೆಯ ಸಿನಿಮಾಗಳ ಮೂಲಕವೇ ತಮ್ಮ ಗುರುತನ್ನು ಉಳಿಸುವ ಪ್ರಯತ್ನದಲ್ಲಿದ್ದಾರೆ.

■ ಪದ್ಮನಾಭ ಭಟ್

ನಾನು ಚಿತ್ರರಂಗಕ್ಕೆ ಕಾಲಿರಿಸಿದ್ದು 2009ರಲ್ಲಿ. ನಾನು ನಟಿಸಿದ ಸಿನಿಮಾಗಳ ಸಂಖ್ಯೆ ಹೆಚ್ಚಿಲ್ಲ. ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಗೆ ಸಾಕಷ್ಟು ಗ್ಯಾಪ್ ಇದೆ. ಇದನ್ನು ಕಂಡು ಹಲವರು 'ಶರ್ಮಿಳಾಗೆ ಅವಕಾಶಗಳು ಸಿಕ್ತಿಲ್ಲ. ಹಾಗಾಗಿ ನಟಿಸುತ್ತಿಲ್ಲ' ಎಂದು ಬರೆದರು. ಆದರೆ ನಾನು ಚಿತ್ರರಂಗಕ್ಕೆ ಬಂದು ಹತ್ತು ವರ್ಷಗಳು ಕಳೆದಿವೆ. ಈಗಲೂ ನಾನು ಸಿನಿಮಾಗಳನ್ನು ಒಳ್ಳೆಯ ಸಿನಿಮಾಗಳನ್ನು ಮಾಡುತ್ತಿದ್ದೇನೆ' ಹೀಗೆ ಹೇಳಿ, ತಮ್ಮ ಬಗ್ಗೆ ಆಡಿಕೊಂಡವರ ಕುರಿತಾದ ಕಹಿಯೂ ಕರಗಿಹೋಗುವ ಹಾಗೆ ನಕ್ಕರು ಶರ್ಮಿಳಾ.

ದಶಕದ ಕಾಲ ಚಿತ್ರರಂಗದಲ್ಲಿ ನಾಯಕಿಯಾಗಿ ಉಳಿದುಕೊಳ್ಳುವುದು ಖಂಡಿತ ಸಣ್ಣ ವಿಷಯವಲ್ಲ. ನಾನಿನ್ನೂ ನಟಿಸುತ್ತಿದ್ದೇನೆ ಎಂದು ತೋರಿಸಿಕೊಳ್ಳಲಿಕ್ಕೋಸ್ಕರ ಸಿನಿಮಾ ಮಾಡುವುದು ಶರ್ಮಿಳಾ ಅವರಿಗೂ ಸುತಾರಾಂ ಇಷ್ಟವಿಲ್ಲ. 'ಜಾಸ್ತಿ ಸಿನಿಮಾ ಮಾಡಬೇಕು. ವರ್ಷವಿಡೀ ಬ್ಯುಸಿ ಇರಬೇಕು. ಒಂದರ ಹಿಂದೆ ಇನ್ನೊಂದು ಸಿನಿಮಾ ಬಿಡುಗಡೆಯಾಗಬೇಕು ಎಂದು ನಾನು ಯಾವತ್ತೂ ಅಂದುಕೊಂಡವಳಲ್ಲ. ಸಿನಿಮಾರಂಗಕ್ಕೆ ಬರುವಾಗಲೇ ನಾನು ಎಂಥ ಸಿನಿಮಾಗಳನ್ನು ಒಪ್ಪಿಕೊಳ್ಳಬೇಕು ಎಂಬ ಬಗ್ಗೆ ನನಗೆ ಖಚಿತ ಅಭಿಪ್ರಾಯ ಇತ್ತು. ನನ್ನ ಈ ಆಲೋಚನೆಗೆ ಒಗ್ಗದ ಸಿನಿಮಾಗಳನ್ನು ನಾನು ಯಾವತ್ತೂ ಒಪ್ಪಿಕೊಳ್ಳಲಿಲ್ಲ. ಒಳ್ಳೆಯ ನಿರ್ದೇಶಕ, ಒಳ್ಳೆಯ ಕಥೆಗೆ ಸಾಕಷ್ಟು ಕಾದಿದ್ದೇನೆ; ಕಾಯುತ್ತೇನೆ. ಹಾಗಾಗಿಯೇ ನಾನು ನಟಿಸಿರುವ ಸಿನಿಮಾಗಳ ಸಂಖ್ಯೆ ಕಡಿಮೆ. ಅದರ ಬಗ್ಗೆ ನನಗೆ ಯಾವ ಬೇಸರವೂ ಇಲ್ಲ' ಎಂದು ಖಚಿತವಾಗಿ ಹೇಳುತ್ತಾರೆ ಅವರು.

2017ರಲ್ಲಿ ತೆರೆಕಂಡ 'ಆಕೆ' ಮತ್ತು 'ಮಾಸ್ ಲೀಡರ್' ಸಿನಿಮಾಗಳ ನಂತರ ಶರ್ಮಿಳಾ ತೆರೆಯ ಮೇಲೆ ಕಾಣಿಸಿಕೊಂಡಿಲ್ಲ. ಕಳೆದ ವರ್ಷ 'ಮೈಸೂರ್ ಮಸಾಲಾ' ಎಂಬ ಸಿನಿಮಾದಲ್ಲಿ ನಟಿಸಿದ್ದಾರಾದರೂ ಅದಿನ್ನೂ ತೆರೆಕಂಡಿಲ್ಲ.

'ಸಿನಿಮಾ ನನಗೆ ಬರೀ ವೃತ್ತಿಯಷ್ಟೇ ಅಲ್ಲ; ಅದು ಹುಚ್ಚು' ಎಂದು ಹೇಳಿಕೊಳ್ಳುವ ಶರ್ಮಿಳಾ, ನಟನೆಯ ಆಚೆಗೂ ಸಿನಿಮಾ ಮಾಧ್ಯಮದ ಕುರಿತು ಆಸಕ್ತಿ ಬೆಳೆಸಿಕೊಂಡಿದ್ದಾರೆ. ಛಾಯಾಗ್ರಹಣ, ಸೆಟ್ ವಿನ್ಯಾಸ, ಸಂಕಲನ ಹೀಗೆ ಹಲವು ವಿಭಾಗಗಳ ಕುರಿತು ಅವರಿಗೆ ಆಸಕ್ತಿ ಇದೆ. ಇದೇ ಆಸಕ್ತಿಯೇ ಅವರನ್ನು ನಿರ್ಮಾಣದ ಕಡೆಗೂ ಸೆಳೆದಿದೆ. ಕಳೆದ ವರ್ಷ ಒಂದು ತಮಿಳು ಸಿನಿಮಾ ನಿರ್ಮಾಣ ಮಾಡಿದ್ದ ಶರ್ಮಿಳಾ, ಈಗ ಕನ್ನಡದಲ್ಲಿ 'ವೈತರಣಿ' ಎಂಬ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ಕಹಿ' ಮತ್ತು 'ಅಳಿದುಳಿದವರು' ಸಿನಿಮಾ ನಿರ್ದೇಶಿಸಿದ್ದ ಅರವಿಂದ್ ಶಾಸ್ತ್ರಿ ಅವರ ನಿರ್ದೇಶನದ ಈ ಚಿತ್ರದಲ್ಲಿ ನೀನಾಸಂ ಸತೀಶ್, ಶರ್ಮಿಳಾ ಜೊತೆ ತೆರೆ ಹಂಚಿಕೊಳ್ಳುತ್ತಿದ್ದಾರೆ.

'ಚಿತ್ರದ ಕಥೆ ಇಷ್ಟವಾಗಿ ನಾನು ನಿರ್ಮಾಣ ಮಾಡುವುದಕ್ಕೆ ಒಪ್ಪಿಕೊಂಡೆ. ಆಗ ನನಗೆ ನಟಿಸುವ ಉದ್ದೇಶ ಇರಲಿಲ್ಲ. ನಿರ್ದೇಶಕರೇ ಈ ಪಾತ್ರ ನಿಮಗೇ ಹೆಚ್ಚು ಒಪ್ಪುತ್ತದೆ ಎಂದು ಹೇಳಿ ಒತ್ತಾಯಿಸಿದ್ದರಿಂದ ನಟನೆಗೆ ಒಪ್ಪಿಕೊಂಡೆ. ಇದೊಂದು ವಿಭಿನ್ನ ಥ್ರಿಲ್ಲರ್ ಸಿನಿಮಾ. ಪತ್ತೆದಾರಿ ಪತ್ರಕರ್ತೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದು ವಿವರಣೆ ನೀಡುವ ಶರ್ಮಿಳಾಗೆ ಮುಂದಿನ ವರ್ಷ ಇನ್ನೊಂದು ಕನ್ನಡ ಸಿನಿಮಾ ನಿರ್ಮಾಣ ಮಾಡುವ ಉದ್ದೇಶವೂ ಇದೆಯಂತೆ.

ಸದ್ಯಕ್ಕೆ ಅವರು 'ಗಾಳಿಪಟ 2' ಸಿನಿಮಾದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಫೆಬ್ರುವರಿಯಲ್ಲಿ 'ವೈತರಣಿ' ಎರಡನೇ ಶೆಡ್ಯೂಲ್ ಚಿತ್ರೀಕರಣ ನಡೆಯಲಿದೆ. ಈ ಎರಡು ಸಿನಿಮಾಗಳ ಚಿತ್ರೀಕರಣ ಮುಗಿದ ಮೇಲೆಯೇ ಮುಂದಿನ ಸಿನಿಮಾ ಒಪ್ಪಿಕೊಳ್ಳುತ್ತೇನೆ ಎನ್ನುತ್ತಾರೆ ಅವರು.

ಕಳೆದ ಹತ್ತು ವರ್ಷಗಳಲ್ಲಿ ಇಟ್ಟ ಹೆಜ್ಜೆಗಳು ವಿರಳ ಇರಬಹುದು. ಆದರೆ ಅವುಗಳು ಅಚ್ಚೊತ್ತಿರುವ ಸ್ಪಷ್ಟ ಗುರುತೇ ತನ್ನನ್ನು ಇನ್ನಷ್ಟು ವರ್ಷ ಗಟ್ಟಿಯಾಗಿ ನೆಲೆಯೂರುವಂತೆ ಮಾಡುತ್ತದೆ ಎಂಬ ನಂಬಿಕೆ ಶರ್ಮಿಳಾ ಅವರಲ್ಲಿ ಎದ್ದು ಕಾಣಿಸುತ್ತದೆ. ■